# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 22


ಸ್ವಾಮಿ ನಿತ್ಯಸ್ಥಾನಂದ

### ಶಕ್ತಿಯೇ ಜಗತ್ತಿನ ಮೂಲಾಧಾರ

**ಶ್ರೀರಾಮಕೃಷ್ಣರು:** ‘‘ಶಕ್ತಿಯೇ ಜಗತ್ತಿನ ಮೂಲಾಧಾರ. ಆ ಆದ್ಯಾಶಕ್ತಿಯಲ್ಲಿ ವಿದ್ಯೆ ಅವಿದ್ಯೆ ಎರಡೂ ಇವೆ. ಅವಿದ್ಯೆ ಮುಗ್ಧಕಾರಿ. ಅವಿದ್ಯೆ ಕಾಮಕಾಂಚನವನ್ನು ಸೃಷ್ಟಿಸಿ, ಅದರಿಂದ ಮೋಹಗೊಳಿಸುತ್ತದೆ. ವಿದ್ಯೆ ಭಕ್ತಿ, ದಯೆ, ಜ್ಞಾನ, ಪ್ರೇಮ ಇವನ್ನು ಉಂಟುಮಾಡುತ್ತದೆ. ಇವು ನಮ್ಮನ್ನು ಭಗವಂತನ ಕಡೆಗೆ ಕರೆದೊಯ್ಯುತ್ತವೆ. ಅವಿದ್ಯೆಯನ್ನು ಪ್ರಸನ್ನಗೊಳಿಸಬೇಕು. ಅದಕ್ಕಾಗಿಯೇ ಶಕ್ತಿಪೂಜಾ ಪದ್ಧತಿ ರೂಢಿಗೆ ಬಂದಿರುವುದು.’’

‘**ಶಿವಶಕ್ತಿಸಂಯೋಗಾತ್ ಜಾಯತೇ ಸೃಷ್ಟಿಕಲ್ಪನಾ।**’ ‘ಶಿವ ಮತ್ತು ಶಕ್ತಿ ಇವರ ಒಂದುಗೂಡುವಿಕೆಯಿಂದ ಸೃಷ್ಟಿಕಲ್ಪನೆಯು ಉಂಟಾಗುತ್ತದೆ’ ಎಂದು ತಂತ್ರಶಾಸ್ತ್ರವು ಸಾರುತ್ತದೆ. ಇಲ್ಲಿ ‘ಶಿವ’ ಎಂದರೆ ವೇದಾಂತದಲ್ಲಿ ಕರೆಯಲ್ಪಡುವ ನಿರ್ಗುಣ, ನಿರಾಕಾರ, ನಿಷ್ಕ್ರಿಯ, ಆತ್ಯಂತಿಕ ಸತ್ಯ. ಶಕ್ತಿಯು ಆ ಸತ್ಯದ ಅವಿಭಾಜ್ಯ ಅಂಗ-ಬೆಂಕಿ ಮತ್ತು ಅದರ ಸುಡುವ ಶಕ್ತಿಯಂತೆ. ಉಪನಿಷತ್ತು ಹೇಳುತ್ತದೆ, ಈಶ್ವರನಲ್ಲಿ ಸೃಷ್ಟಿ ಸಂಕಲ್ಪ ಉಂಟಾಯಿತು ಎಂದು. ‘‘**ಸ ಈಕ್ಷತ ಬಹುಸ್ಯಾಂ ಪ್ರಜಾಯೇಯತ**’’-ಅವನು ತಾನು ಬಹುವಾಗುತ್ತೇನೆ ಎಂದು ಸಂಕಲ್ಪಿಸಿದನಂತೆ. ಶಿವನಲ್ಲಿ ಸೃಷ್ಟಿಯ ಕ್ರಿಯೆಯನ್ನು ಆರೋಪಿಸಲಾಗುವುದಿಲ್ಲ, ಹಾಗೆಯೇ ಕೇವಲ ಶಕ್ತಿಯಲ್ಲಿ ಸೃಷ್ಟಿಕಲ್ಪನೆಯನ್ನು ಆರೋಪಿಸಲಾಗುವುದಿಲ್ಲ. ಆದ್ದರಿಂದ ಇವರೆಡರ ಸಂಯೋಗದಿಂದ ಸೃಷ್ಟಿಯು ಪ್ರಾರಂಭವಾಗಿದೆ ಎಂದು ಭಾವಿಸಬೇಕಾಗುತ್ತದೆ.

ತಂತ್ರಶಾಸ್ತ್ರದ ಪ್ರಕಾರ ಈ ಸೃಷ್ಟಿ ಪ್ರಕ್ರಿಯೆಯ ವಿವಿಧ ಹಂತಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಬಹುದು:



ಮೊದಲನೆಯ ಹಂತವೇ **ಶಿವ-ಶಕ್ತಿ ತತ್ತ್ವ**: ಇದು ಚೇತನಶಕ್ತಿ ಮತ್ತು ಕ್ರಿಯಾಶಕ್ತಿಗಳ ಕೂಡುವಿಕೆ. ಇವೆರಡನ್ನೂ ಆಂಗ್ಲಭಾಷೆಯಲ್ಲಿ Static and dynamic objects of Reality ಎಂದು ಕರೆಯಬಹುದು. ಯಂತ್ರವೇ ಕೆಲಸಮಾಡುವುದಾದರೂ ಅದಕ್ಕೆ ವಿದ್ಯುತ್ ಸ್ಪರ್ಶದ ಆವಶ್ಯಕತೆಯಿದೆ. ವಿದ್ಯುತ್ ಕೆಲಸಮಾಡದಿದ್ದರೂ ಅದರ ಸನ್ನಿಧಿ ಅತ್ಯಾವಶ್ಯಕ. ಇವೆರಡರ ಸಂಯೋಗದಿಂದ ಹಲವಾರು ವಸ್ತುಗಳು ಉತ್ಪನ್ನವಾಗುತ್ತವೆ. ಹೀಗೆಯೇ ಸೃಷ್ಟಿ ಕೂಡ. ಎರಡನೆಯ ಹಂತ ಸದಾಶಿವತತ್ತ್ವ. ಇದೇ ಸ್ಥಿತಿಯನ್ನು ‘ನಾದ’ ಎಂದು ಕರೆಯಲಾಗುತ್ತದೆ, ಏಕೆಂದರೆ ಇದು ಸೃಷ್ಟಿ ಸಂಕಲ್ಪದ ಪ್ರಥಮ ಸ್ಪಂದನ. ಇಲ್ಲಿ ಆತ್ಮಪ್ರಜ್ಞೆ (subjective feeling) ಪ್ರಧಾನವಾಗಿರುತ್ತದೆ. ಮುಂದಿನ ಹಂತ ಈಶ್ವರ ತತ್ತ್ವ. ಇದನ್ನು ‘ಬಿಂದು’ ಎಂದು ಕರೆಯಲಾಗುತ್ತದೆ, ಏಕೆಂದರೆ ಇದರಲ್ಲಿ ಇಡೀ ಸೃಷ್ಟಿಯು ಬೀಜದಲ್ಲಿ ಮರವು ಸುಪ್ತಾವಸ್ಥೆಯಲ್ಲಿ ಅಡಗಿರುವಂತೆ ಇರುತ್ತದೆ. ಇಲ್ಲಿ ವಸ್ತುಪ್ರಧಾನ (objective) — ಜಗದ್ವಸ್ತುವು ಬೀಜರೂಪದಲ್ಲಿ ಕಾಣಿಸಿಕೊಳ್ಳುವುದರಿಂದ. ನಾಲ್ಕನೆಯದು ಸದ್ವಿದ್ಯಾ ತತ್ತ್ವ. ಈ ಹಂತದಲ್ಲಿ ಅಹಂ ಮತ್ತು ಇದಂ (subject and object) ಎರಡೂ ಪ್ರಧಾನ. ಐದನೆಯದಾದ ಮಾಯಾತತ್ತ್ವವು ಇವೆರಡನ್ನೂ ಪ್ರತ್ಯೇಕಿಸುತ್ತದೆ.

ಮುಂದಿನ ಹಂತವೇ 'ಕಲಾ'— ಜಗತ್ತಿನ ವ್ಯಕ್ತಾವಸ್ಥೆ. ಪರಬ್ರಹ್ಮ ಸತ್ಯವು ನಾದ-ಬಿಂದು-ಕಲಾತೀತವಾದುದು.

ಇಡೀ ಜಗತ್ತು ಆ ಶಕ್ತಿಯ ಆಟ ಎನ್ನುತ್ತಾರೆ ಶ್ರೀರಾಮ ಕೃಷ್ಣರು. ಇದರ ಹಿಂದಿರುವ ಸತ್ಯವನ್ನು ಅರಿಯಬೇಕಾದರೆ ಶಕ್ತಿಯನ್ನು ಒಲಿಸಿಕೊಳ್ಳಬೇಕು, ಆಕೆ ದಾರಿಮಾಡಿಕೊಡಬೇಕು. ಈಶಾವಾಸ್ಯ ಉಪನಿಷತ್ತಿನಲ್ಲಿಯೂ ಇದೇ ಭಾವನೆಯು ವ್ಯಕ್ತವಾಗಿದೆ: *(೧೫)*

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್।**
**ತತ್ ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

''ಸತ್ಯದ ಮುಖವು ಚಿನ್ನದ ಪಾತ್ರೆಯಿಂದ ಆವರಿಸಲ್ಪಟ್ಟಿದೆ. (ಅಂದರೆ ಈ ಆಕರ್ಷಕವಾದ ಮಾಯಾಜಗತ್ತು ಸತ್ಯವನ್ನು ಮುಸುಕಿದೆ) ಎಲೈ ಪೋಷಕನೆ, ಈ ಮುಸುಕನ್ನು ತೆಗೆದು ಸತ್ಯಧರ್ಮವನ್ನು ಪಾಲಿಸುತ್ತಿರುವ ನನಗೆ ಆ ಸತ್ಯವನ್ನು ತೋರಿಸು.''

ಮಾಯೆಯ ಮೂಲಕವೇ ನಾವು ಮಾಯೆಯನ್ನು ದಾಟಿ ಹೋಗಬೇಕು - ನದಿಯ ಮೂಲಕವೇ ನದಿಯನ್ನು ದಾಟಿ ಹೋಗುವಂತೆ. ಪ್ರಾಪಂಚಿಕ ಆಸೆ ಒಂದು ಬಂಧನ - ಇದು ಮಾಯೆ. ಇದು ಬೇಡವೆಂಬ ವಿವೇಕಬುದ್ಧಿಯು ಬಂಧಮುಕ್ತಿಗೆ ಕಾರಣ. ಆದರೆ ಅದು ಮನಸ್ಸಿಗೇ ಸೇರಿದುದಾದುದರಿಂದ ಅದೂ ಮಾಯೆ. ಮಾಯೆಯೇ ನಮ್ಮನ್ನು ಮಾಯಾತೀತರನ್ನಾಗಿ ಮಾಡಬೇಕು. ಆದ್ದರಿಂದಲೇ ನಾವು ಭಗವತಿಯನ್ನು ಆರಾಧಿಸಬೇಕು.

**ಶ್ರೀರಾಮಕೃಷ್ಣರು:** ''ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿದ್ದೇ ಆದರೆ ಆತನ ಹೊರಗಿನ ಐಶ್ವರ್ಯ, ಆತನ ಜಗತ್ತಿನ ಐಶ್ವರ್ಯ ಮರೆತುಹೋಗಿ ಬಿಡುತ್ತದೆ. ಆತನ ದರ್ಶನ ಪಡೆದ ನಂತರ ಆತನ ಐಶ್ವರ್ಯದ ಭಾವನೆ ಮನಸ್ಸಿನಲ್ಲಿ ನಿಲ್ಲದು. ಭಕ್ತಿ ಭಗವದಾನಂದದಲ್ಲಿ ಒಮ್ಮೆ ಮುಗ್ಧನಾಗಿ ಬಿಟ್ಟ ಎಂದರೆ ಆತನಿಗೆ ಇನ್ನು ಬೇರೆ ಯಾವುದರ ಭಾವನೆಯೂ ಇರದು. ನರೇಂದ್ರನನ್ನು ನೋಡಿದರೆ ನಾನು ಕೇಳಬೇಕಾಗಿರುವುದಿಲ್ಲ, 'ನಿನ್ನ ಹೆಸರೇನು? ನಿನ್ನ ಮನೆ ಎಲ್ಲಿದೆ?' ಎಂಬುದಾಗಿ. ಹಾಗೆಲ್ಲ ಪ್ರಶ್ನೆ ಹಾಕಲು ಸಮಯ ತಾನೇ ಎಲ್ಲಿರುತ್ತದೆ? ಒಮ್ಮೆ ಒಬ್ಬ ಹನುಮಂತನನ್ನು ಕೇಳಿದನಂತೆ, 'ಇಂದು ಯಾವ ತಿಥಿ?' ಎಂದು. ಆತ ಅದಕ್ಕೆ ಹೇಳಿದನಂತೆ, 'ತಮ್ಮ, ನನಗೆ ತಿಥಿ, ವಾರ, ನಕ್ಷತ್ರ ಇವು ಯಾವುವೂ ಗೊತ್ತಿಲ್ಲ. ನಾನು ಕೇವಲ ರಾಮಚಿಂತನೆಯನ್ನು ಮಾತ್ರ ಮಾಡುತ್ತಿದ್ದೇನೆ.''

ಹಾಗಾದರೆ ಭಗವತ್ಸಾಕ್ಷಾತ್ಕಾರವಾಗುವವರೆಗೂ ಐಶ್ವರ್ಯದ ಕಡೆಗಿನ ಆಕರ್ಷಣೆ ಇರಲೆಂದು ಸುಮ್ಮನೆ ಇದ್ದುಬಿಡುವುದೆ? ಹಾಗಿದ್ದರೆ ಭಗವತ್ಸಾಕ್ಷಾತ್ಕಾರವಾಗುವ ಸಂದರ್ಭವೇ ಬರುವುದಿಲ್ಲ. ಆದ್ದರಿಂದ ನಮ್ಮ ಪ್ರಯತ್ನವೂ ಅತ್ಯಂತ ಆವಶ್ಯಕ. ಒಂದು ವ್ಯಾಪಾರವನ್ನು ಶುರುಮಾಡಬೇಕಾದರೆ ಪ್ರಾರಂಭಿಕ ಧನ ಆವಶ್ಯಕ. ವ್ಯಾಪಾರ ಮುಂದುವರಿದಂತೆ ಹಣವೂ ಅಧಿಕವಾಗುತ್ತಾ ಹೋಗುತ್ತದೆ. ಹಾಗೆಯೇ ಭಗವದಾಕರ್ಷಣೆ ಸ್ವಲ್ಪವಾದರೂ ಇದ್ದರೆ ಪ್ರಪಂಚಾಕರ್ಷಣೆಯು ಅಷ್ಟರಮಟ್ಟಿಗೆ ಕಡಿಮೆಯಾಗುತ್ತದೆ. ನಾವು ಸಾಧನೆಯಲ್ಲಿ ಮುಂದುವರಿದಂತೆ ಭಗವದಾಕರ್ಷಣೆ ಅಧಿಕವಾಗುತ್ತದೆ. ಅದು ಹೆಚ್ಚಾದಷ್ಟೂ ಪ್ರಪಂಚಾಕರ್ಷಣೆ ಕಡಿಮೆಯಾಗುತ್ತಾ ಹೋಗುತ್ತದೆ-ಭೂಮಿಯಿಂದ ದೂರವಾದಷ್ಟೂ ಗುರುತ್ವಾಕರ್ಷಣೆ ಕಡಿಮೆಯಾಗುತ್ತಾ ಹೋಗುತ್ತದೆ - ಸುಮ್ಮನೆ ಭೂಮಿಯ ಮೇಲೆ ಇದ್ದುಬಿಟ್ಟರೆ ನಡೆಯುವುದಿಲ್ಲ.

## ಶ್ರದ್ಧೆಯ ಮಹಿಮೆ

**ಶ್ರೀರಾಮಕೃಷ್ಣರು:** ''ಕೃಷ್ಣಕಿಶೋರನದು ಎಂಥ ಅದ್ಭುತ ಶ್ರದ್ಧೆ! ಆತ ಬೃಂದಾವನಕ್ಕೆ ಹೋಗಿದ್ದ. ಒಂದು ದಿನ ನೀರಡಿಕೆಯಾಯಿತು. ಬಾವಿಯ ಹತ್ತಿರ ಹೋದಾಗ ಅಲ್ಲಿ ಯಾರೋ ಒಬ್ಬ ನಿಂತುಕೊಂಡಿದ್ದ. ಆತನನ್ನು ಸ್ವಲ್ಪ ನೀರು ಸೇದಿಕೊಡು ಎಂದು ಕೇಳಲಾಗಿ, ಆತ ಹೇಳಿದ: 'ನಾನು ನೀಚಕುಲಕ್ಕೆ ಸೇರಿದವ, ನೀವು ಬ್ರಾಹ್ಮಣರು. ನಿಮಗೆ ಹೇಗೆ ನಾನು ನೀರು ಸೇದಿಕೊಡಲಿ ?'' ಕೃಷ್ಣಕಿಶೋರ ಹೇಳಿದ: ''ನೀನು 'ಶಿವ, ಶಿವ' ಅಂತ ಹೇಳು. ನೀನು 'ಶಿವ ಶಿವ' ಎಂದು ಹೇಳಿದೊಡನೆಯೇ ಶುದ್ಧನಾಗಿಬಿಡುತ್ತೀಯೆ.'' ಆತ ಹಾಗೇ ಮಾಡಿ, ನೀರು ಸೇದಿಕೊಟ್ಟ. ಕೃಷ್ಣಕಿಶೋರ ಬಹಳ ಆಚಾರವಂತ ಬ್ರಾಹ್ಮಣ. ಆದರೂ ಆ ನೀರನ್ನು ಕುಡಿದುಬಿಟ್ಟ. ಎಂಥ ಶ್ರದ್ಧೆ ಆತನದು!''

ಭಗವನ್ನಾಮದಲ್ಲಿ ಒಂದು ಪರಿವರ್ತನಾ ಶಕ್ತಿಯಿದೆ, ಅದರಲ್ಲಿ ನಮಗೆ ನಂಬಿಕೆ ಇರಬೇಕು ಎಂಬುದನ್ನು ಇಲ್ಲಿ ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ. ಪ್ರತಿಯೊಂದು ವಸ್ತುವೂ ವ್ಯಕ್ತಿಯೂ ದೇವತೆಯೂ ಒಂದೊಂದು ಸ್ಪಂದನದ ಸ್ಥಿತಿಯಲ್ಲಿರುತ್ತಾರೆ. ಇದು ಅವರ ಆಂತರಿಕ ಚಲನೆಯನ್ನು ಅವಲಂಬಿಸಿರುತ್ತದೆ. ಆಯಾಯಾ ದೇವತೆಯ ನಾಮೋಚ್ಚಾರಣೆಯನ್ನು ನಿರಂತರವಾಗಿ ಶ್ರದ್ಧೆಯಿಂದ ಮಾಡುವುದರಿಂದ ನಮ್ಮ ಈಗಿರುವ ಸ್ಪಂದನದ ಸ್ಥಿತಿಯು ಬದಲಾಗಿ ಆ ದೇವತೆಯ ಸ್ಪಂದನದ ಸ್ಥಿತಿಯೊಂದಿಗೆ ಮೇಳೈಸುತ್ತದೆ. ಆ ದೇವತೆಯ ಭಾವ ನಮ್ಮಲ್ಲಿ ಆವಿರ್ಭವಿಸುತ್ತದೆ.

ಶ್ರದ್ಧೆಯ ಮಹತ್ವದ ಬಗ್ಗೆ ಪ್ರಸಿದ್ಧ ನರವಿಜ್ಞಾನಿಯಾದ ಆ್ಯಂಡ್ರಿವ್ ನ್ಯೂಬರ್ಗ್ ಹೀಗೆ ಹೇಳುತ್ತಾರೆ: ''ಮಾನವ ಚೇತನದಲ್ಲಿರುವ ಶ್ರದ್ಧೆಯು ನಮ್ಮ ಬದುಕಿಗೆ ಪ್ರೇರಣೆಯನ್ನೀಯುತ್ತದೆ, ಜೀವನದ ದ್ವಂದ್ವಗಳನ್ನು ಮೀರಿ ನಿಲ್ಲಲು ಸ್ಫೂರ್ತಿಯನ್ನೀಯುತ್ತದೆ. ಇದು ಬದುಕಿಗೆ ಸಾರ್ಥಕತೆಯನ್ನು ನೀಡುತ್ತದೆ, ಮತ್ತು ಜೀವನವು ಅರ್ಥಪೂರ್ಣವಾಗುತ್ತದೆ.'' *( How God Changes our Brains, P.20-21 )*

''ಯಾವುದಾದೊಂದರಲ್ಲಿ ನಿಮಗೆ ದೃಢವಾದ ನಂಬಿಕೆಯಿದ್ದರೆ - ನಿಮ್ಮಲ್ಲಿ ನಿಮಗೆ ಸಾಕಷ್ಟು ಶ್ರದ್ಧೆ ಇದ್ದರೆ - ಆಗ

ನಿಮ್ಮಲ್ಲಿ ರೋಗ-ನಿರೋಧಕ ಮತ್ತು ಪ್ರೇರಣಾಶಕ್ತಿ ಇವೆರಡೂ ಜಾಗೃತಗೊಳ್ಳುತ್ತವೆ.'' *(ಅದೇ, ಪು. ೩೪)*

ಆ್ಯಂಡ್ರಿವ್ ನ್ಯೂಬರ್ಗ್ ಪ್ರಕಾರ ನಾವು ಬಹಳ ಕಾಲ ದೇವರನ್ನು ಚಿಂತಿಸುತ್ತ ಹೋದರೆ ನಮ್ಮ ಮಿದುಳಿನಲ್ಲಿ ಸಾಕಷ್ಟು ಬದಲಾವಣೆ ಉಂಟಾಗುತ್ತದೆ. ಹೊಸಬಗೆಯ ನರಸಂಪರ್ಕಗಳು ಉಂಟಾಗುತ್ತವೆ. ಇದು ಇಡೀ ವ್ಯಕ್ತಿತ್ವದ ಮೇಲೆ ಪರಿಣಾಮವಾಗಿ ಆ ವ್ಯಕ್ತಿಯು ಮೊದಲಿನಂತಿರುವುದೇ ಇಲ್ಲ. ಅವನ ದೇಹ ಮೃಣ್ಮಯವಲ್ಲ, ಚಿನ್ಮಯವಾಗುತ್ತದೆ. ಇದೇ ವಿಚಾರವೂ ಕೃಷ್ಣ ಕಿಶೋರನ ಈ ಕೆಳಗಿನ ಮಾತಿನಲ್ಲಿ ವ್ಯಕ್ತವಾಗಿದೆ: ''ಯಾರು ಭಗವಚ್ಚಿಂತನೆ ಮಾಡುತ್ತಿದ್ದಾನೆಯೋ, ಯಾರು ರಾಮಚಿಂತನೆ ಮಾಡುತ್ತಿದ್ದಾನೆಯೋ, ಅಂಥವನ ದೇಹ ಚಿನ್ಮಯದೇಹ.''

ಶ್ರೀರಾಮಕೃಷ್ಣರು ಕೃಷ್ಣಕಿಶೋರನ ಬಗ್ಗೆ ಹೇಳುತ್ತಿದ್ದಾರೆ: ''ಒಂದು ದಿನ ಹೋಗಿ ನೋಡುತ್ತೇನೆ, (ಕೃಷ್ಣಕಿಶೋರ) ಕುಳಿತು ಕೊಂಡು ಏನೋ ಯೋಚಿಸುತ್ತಾ ಇದ್ದಾನೆ. ಕೇಳಿದೆ: 'ಏನು ನಡೆಯುತ್ತ ಇದೆ ಮನಸ್ಸಿನಲ್ಲಿ?' ಆತ ಹೇಳಿದ: 'ಕಂದಾಯ ದವರು ಬಂದಿದ್ದರು ಹೆದರಿಸಿದರು, ಕಂದಾಯ ಕೊಡದಿದ್ದರೆ ಮನೆಯ ಪಾತ್ರೆಪದಾರ್ಥಗಳನ್ನೆಲ್ಲ ಹರಾಜು ಹಾಕಿಸಿಬಿಡುತ್ತೇವೆ ಎಂಬುದಾಗಿ. ಅದಕ್ಕಾಗಿ ಯೋಚಿಸುತ್ತಾ ಇದ್ದೇನೆ.' ನಾನು ಹೇಳಿದೆ: 'ಅದಕ್ಕಾಗಿ ಏಕೆ ನೀನು ಇಷ್ಟೊಂದು ಯೋಚಿಸಬೇಕು? ಅವರು ಬೇಕಾದರೆ ನಿನ್ನ ಪಾತ್ರೆ ಪದಾರ್ಥಗಳನ್ನು ತೆಗೆದು ಕೊಂಡು ಹೋಗಲಿ. ಇನ್ನೂ ಬೇಕಾದರೆ ನಿನ್ನ ಶರೀರವನ್ನೂ ಕಟ್ಟಿ ಹೊತ್ತುಕೊಂಡು ಹೋಗಿಬಿಡಲಿ. ಆದರೆ ನಿನ್ನನ್ನು ಮಾತ್ರ ಅವರು ಎಂದಿಗೂ ಹೊತ್ತುಕೊಂಡು ಹೋಗಲಾರರು ತಾನೆ? ನೀನು 'ಆಕಾಶ' ಅಲ್ಲವೆ?' (ನರೇಂದ್ರನೇ ಮೊದಲಾದವರು ನಗ ಲಾರಂಭಿಸಿದರು) ಆತ ತಾನು ಆಕಾಶವತ್ ಎಂಬುದಾಗಿ ಹೇಳಿ ಕೊಳ್ಳುತ್ತಿದ್ದ. ಅಧ್ಯಾತ್ಮರಾಮಾಯಣ ಓದುತ್ತಿದ್ದರಿಂದ ಆ ಭಾವನೆ ಆತನಿಗೆ ಬಂದಿತ್ತು. ಆಗಾಗ ಆತನನ್ನು 'ಖ' ಎಂದು ಸಂಬೋ ಧಿಸಿ ತಮಾಷೆ ಮಾಡುತ್ತಿದ್ದೆ. ಅಂದು ನಾನು ನಗುತ್ತ ಆತನಿಗೆ ಹೇಳಿದೆ: 'ನೀನು 'ಖ' - ಕಂದಾಯದವರು ನಿನ್ನನ್ನು ಎತ್ತಿ ಕೊಂಡು ಹೋಗಲಾರರು.''

ನುಡಿಗೂ ನಡೆಗೂ ಎಷ್ಟೊಂದು ವ್ಯತ್ಯಾಸವಿರಬಲ್ಲದು ಎಂಬುದನ್ನು ಇಲ್ಲಿ ಕೃಷ್ಣಕಿಶೋರನ ಪ್ರಸಂಗದ ಮೂಲಕ ಶ್ರೀರಾಮಕೃಷ್ಣರು ತೋರಿಸಿಕೊಡುತ್ತಿದ್ದಾರೆ. 'ನಾನು ಆತ್ಮ, ಆಕಾಶ ದಂತೆ ಎಂದು ಹೇಳಿದ ಮಾತ್ರಕ್ಕೆ ದೇಹ ಬುದ್ಧಿ ಹೊರಟು ಹೋಗುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಗಿಳಿಯು ರಾಮ, ಕೃಷ್ಣ ಎಂದು ಯಾವಾಗಲೂ ಹೇಳುತ್ತಿರಬಹುದು. ಅದರ ಪಾಲಿಗೆ ಅವುಗಳು ಶಬ್ದಗಳು ಮಾತ್ರ. ಆದರೆ ಹಾವು ಬಂದು ಹಿಡಿದಾಗ ಅದು 'ಕ್ಯಾ ಕ್ಯಾ' ಎಂದು ಕಿರುಚುತ್ತದೆ. 'ನಾನು ದೇಹೇಂದ್ರಿಯ-ಮನಸ್ಸುಗಳಲ್ಲಿ ನಿಜವಾಗಿಯೂ ನಾನು ಆತ್ಮಸ್ವರೂಪ' ಎಂಬುದನ್ನು ಭಾವಿಸುತ್ತ, ಚಿಂತಿಸುತ್ತ ಹೋದರೆ — ಅದೇ ಸಂದರ್ಭದಲ್ಲಿ ಅದಕ್ಕೆ ಪೂರಕವಾಗಿ ನಮ್ಮ ಜೀವನ ಶೈಲಿಯೂ ಇದ್ದರೆ - ಆಗ ನಮ್ಮಲ್ಲಿ ನಿರ್ದಿಷ್ಟವಾದ ಪರಿವರ್ತನೆಯನ್ನು ನಿರೀಕ್ಷಿಸಬಹುದು. ಆತ್ಮನಿಗೆ ಅತ್ಯಂತ ಸಮೀಪದ ಉದಾಹರಣೆ ಎಂದರೆ ಆಕಾಶ. ಮಡಕೆ ಯೊಳಗೂ ಮಡಕೆಯಲ್ಲಿಯೂ ಮಡಕೆಯ ಹೊರಗೂ ಆಕಾಶ ವಿರುತ್ತದೆ. ಆದ್ದರಿಂದ ಮಡಕೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿದಾಗ ಆಕಾಶವನ್ನು ಸ್ಥಳಾಂತರಿಸಿ ದಂತಾಗುವುದಿಲ್ಲ. 'ಖ' ಎಂದರೆ ಆಕಾಶ - ಹೊರಗೆ ಕಾಣುವ ನೀಲಾಕಾಶವಲ್ಲ, ದೇಶವೆಂದು ಕರೆಯಲ್ಪಡುವ Space ಕೂಡಾ ಅಲ್ಲ. ಆಕಾಶವೆಂದರೆ ಅತ್ಯಂತ ಸೂಕ್ಷ್ಮವಾದ ದ್ರವ್ಯಕಣಗಳು.

***(ಮುಂದುವರಿಯುವುದು)***

## ಸಂಸಾರದಲ್ಲಿ ಸಾಧನೆ

**ಈ** ಸಂಸಾರದಲ್ಲಿ ಕಾಮ, ಕ್ರೋಧ ಇವೇ ಮೊದಲಾದುವುಗಳೊಡನೆ ಯುದ್ಧ ಮಾಡಬೇಕಾಗಿದೆ. ವಿವಿಧ ಕಾಮನೆಗಳೊಡನೆ ಯುದ್ಧ ಮಾಡಬೇಕಾಗಿದೆ, ಆಸಕ್ತಿಯೊಡನೆ ಯುದ್ಧ ಮಾಡಬೇಕಾಗಿದೆ. ಯುದ್ಧವನ್ನು ಕೋಟೆಯೊಳಗಿನಿಂದ ಮಾಡುವುದೇ ಮೇಲು. ಗೃಹದಲ್ಲಿದ್ದುಕೊಂಡೇ ಯುದ್ಧಮಾಡುವುದು ಮೇಲು; ಊಟೋಪಚಾರ ದೊರೆಯುತ್ತೆ; -ಕೈಹಿಡಿದ ಹೆಂಡತಿ ಅನೇಕ ವಿಧವಾಗಿ ಸಹಾಯ ಮಾಡುತ್ತಾಳೆ, ಈ ಕಲಿಯುಗದಲ್ಲಿ ಅನ್ನಗತಪ್ರಾಣ - ಭಿಕ್ಷಾಟನೆಗಾಗಿ ಒಂದು ಏಳು ಮನೆಗೆ ಹೋಗುವುದಕ್ಕೆ ಬದಲು ಒಂದು ಮನೆಯದೇ ಮೇಲು. ಗೃಹದಲ್ಲಿರುವುದು ಕೋಟೆಯೊಳಗಿನಿಂದ ಯುದ್ಧ ಮಾಡಿದ ಹಾಗೆ.

ಸಂಸಾರದಲ್ಲಿರಿ, ಬಿರುಗಾಳಿಗೆ ಸಿಕ್ಕಿದ ಎಂಜಲೆಲೆಯಂತೆ ಇರಿ. ಗಾಳಿ ಅದನ್ನು ಒಮ್ಮೆ ಮನೆಯ ಒಳಕ್ಕೂ, ಒಮ್ಮೊಮ್ಮೆ ತಿಪ್ಪೆಗುಂಡಿಗೂ ಎತ್ತಿ ಬಿಸಾಡುತ್ತದೆ. ಗಾಳಿ ಯಾವ ಕಡೆಗೆ ಬೀಸುವುದೋ ಅದು ಆ ಕಡೆಗೆ ಹೋಗು ತ್ತದೆ. ಒಮ್ಮೊಮ್ಮೆ ಒಳ್ಳೆಯ ಸ್ಥಳಗಳಿಗೆ, ಒಮ್ಮೊಮ್ಮೆ ಮಲಿನ ಸ್ಥಳಗಳಿಗೆ ಹೋಗಿ ಬೀಳುತ್ತದೆ. ಈಗ ನಿನ್ನನ್ನು ಸಂಸಾರದಲ್ಲಿ ಬಿಸಾಡಿದ್ದಾನೆ; ಒಳ್ಳೆಯದು, ಈಗ ಇಲ್ಲೇ ಇರು ಮತ್ತೆ ಯಾವಾಗ ಆತ ನಿನ್ನನ್ನು ಇಲ್ಲಿಂದ ಎತ್ತಿಕೊಂಡು ಹೋಗಿ ಇದಕ್ಕಿಂತಲೂ ಮೇಲಾದ ಜಾಗದಲ್ಲಿ ಬಿಸಾಡುವನೋ ಆಗ ಏನಾಗಬೇಕೋ ಅದು ಆಗುತ್ತದೆ.

*(ಶ್ರೀರಾಮಕೃಷ್ಣ ವಚನವೇದ, ಭಾಗ ೨, ಪು.೧೩೭)*